ದಿನಾಂಕಃ 04.07.2024 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿ ತು.

**ಮುಖ್ಯ ವಿಚಾರಣೆ ಪ್ರತಿವಾದಿ ಪರ ಶ್ರೀ ಬಿ.ಎ.ಎಸ್ ವಕೀಲರಿಂದಃ**

ನಾನು ಈ ದಾವೆಯ 3 ನೇ ಪ್ರತಿವಾದಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಹೇಳಿರುವ ಅಂಶಗಳನ್ನು ನಾನೇ ಹೇಳಿ ಬರೆಯಿಸಿದ್ದೇನೆ ಹಾಗೂ ಅವು ಸತ್ಯವಾಗಿರುತ್ತವೆಂದು ಪ್ರಮಾಣೀಕರಿಸುತ್ತೇನೆ. ಸದರಿ ಪ್ರಮಾಣ ಪತ್ರಿಕೆಯಲ್ಲಿ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

1. ಸ.ನಂ. 1 ರ ಮೂರು ಗಣಕೀಕೃತ ಪಹಣಿಗಳ ದೃಢೀಕೃತ ನಕಲು ಪ್ರತಿಗಳನ್ನು ನಿಡಿ-1 ರಿಂದ 3 ಎಂದು,

2. ಸ.ನಂ. 42 ರ ಗಣಕೀಕೃತ ಪಹಣಿಯ ದೃಢೀಕೃತ ನಕಲು ಪ್ರತಿಯನ್ನು ನಿಡಿ-4 ಎಂದು,

3. ಕಂದಾಯ ಪಾವತಿ ರಶೀದಿಯದೃಢೀಕೃತ ನಕಲು ಪ್ರತಿಯನ್ನು ನಿಡಿ-5 ಎಂದು,

4. ಎಂ.ಆರ್.ಹೆಚ್.8/2017-18 ರ ಮುಟೇಶನ ಪ್ರತಿಯ ದೃಢೀಕೃತ ನಕಲು ಪ್ರತಿಯನ್ನು ನಿಡಿ-6 ಎಂದು,

5. ದಿಃ 31.10.2017 ರ ರಿಕನ್ವೆಯನ್ಸ್ ಡಿಡ್ ನ ದೃಢೀಕೃತ ನಕಲು ಪ್ರತಿಯನ್ನು ನಿಡಿ-7 ಎಂದು,

6. ಸ.ನಂ.1/91 ರ ಜಮೀನು ಹಕ್ಕಿನ ದಾಖಲೆ ರೆಜಿಸ್ಟರ್ ನ ದೃಢೀಕೃತ ನಕಲು ಪ್ರತಿಯನ್ನು ನಿಡಿ-8 ಎಂದು,

7. ಸ.ನಂ.1/91 ರ ಇಂಡೆಕ್ಸ್ ಆಫ್ ಲ್ಯಾಂಡ್ ನ ದೃಢೀಕೃತ ನಕಲು ಪ್ರತಿಯನ್ನು ನಿಡಿ-9 ಎಂದು,

8. ಸ್ವತ್ತಿನ ಮೇಲಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರದದೃಢೀಕೃತ ನಕಲು ಪ್ರತಿಯನ್ನು ನಿಡಿ-10 ಎಂದು,

9. ಸ.ನಂ.1 ರ ಗಣಕೀಕೃತ ಪಹಣಿಯದೃಢೀಕೃತ ನಕಲು ಪ್ರತಿಯನ್ನು ನಿಡಿ-11 ಎಂದು,

10. ಮಂಜೂರಾತಿ ಪತ್ರದ ದೃಢೀಕೃತ ನಕಲು ಪ್ರತಿಯನ್ನು ನಿಡಿ-12 ಎಂದು,

11. ಹುಣಸೂರು ವಿಭಾಗಾಧಿಕಾರಿಗಳು ಆರ್.ಎ. 121/2019 ರಲ್ಲಿ ಮಾಡಿದ ಆದೇಶದ ದೃಢೀಕೃತ ನಕಲು ಪ್ರತಿಯನ್ನು ನಿಡಿ-13 ಎಂದು ಗುರುತಿಸಲಾಯಿತು.

**ಹಾಗಾಗಿ ದಾವೆಯನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.**

**ಪಾಟೀಸವಾಲು ವಾದಿ ಪರ ಶ್ರೀ ಎನ್.ಎನ್. ವಕೀಲರಿಂದಃ**

ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಆಲಿಸಿ ಅನುಮತಿಸಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ,
ನ್ಯಾಯಾಧೀಶರು, ಹುಣಸೂರು.